**ಅಸಲು ದಾವಾ ಸಂಖ್ಯೆಃ 105/2014 ಡಿ.ಡಬ್ಲ್ಯೂ -1**

ದಿನಾಂಕಃ 07.11.2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ಆರ್ ಕೆ ವಕೀಲರಿಂದಃ**

ಈ ದಾವಾ ದಾಖಲಿಸಿದ ನಂತರವೂ ಸಹ ವಾದಿಗೆ ಕ್ರಯ ಪತ್ರ ವಾಗಿರುವ ವಿಚಾರ ನನಗೆ ತಿಳಿದಿರುವುದಿಲ್ಲ, ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರಿಗೆ ಏನೇನು ದಾಖಲೆಗಳಾಗಿವೆ ಎಂದು ನಾನು ಪರಿಶೀಲಿಸಿಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ವಾದಿಯು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಗಿರಿಯಪ್ಪ ಎಂಬುವವರು ವಾದಿಗೆ ಬೋಗಸ್ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ. ಸದರಿ ಕ್ರಯ ಪತ್ರದ ಆಧಾರದಲ್ಲಿ ವಾದಿಯು ದಾವೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯ ಮೇಲೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಒಂದು ಮನೆ ಇದೆ ಎಂದರೆ ಸಾಕ್ಷಿಯು ಒಂದು ಚಿಕ್ಕ ಮನೆ ಇದೆ ನಾವು ಆಗಲೇ ಪೋಲೀಸರಿಗೆ ದೂರು ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ವಿದ್ಯುತ್ ಇಲಾಖೆಗೆ ದೂರು ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಯಾರಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ನಾನು ಇಲ್ಲಿಯವರೆಗೂ ತಿಳಿದುಕೊಂಡಿಲ್ಲ. ನಿಡಿ 1 ರಂತೆ ದಾಖಲಿಸಿರುವ ಓ ಎಸ್ 1664/2009 ರಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ವಾದಿಯು ಸದರಿ ಮನೆ ಕಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯು ಮನೆ ಕಟ್ಟಿದ ನಂತರ ಸದರಿ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ವಾದಿಯಿಂದ ಸದರಿ ಮನೆಯ ಸ್ವಾಧೀನ ಪಡೆದುಕೊಳ್ಳಲು ಯಾವುದೇ ದಾವೆ ಸಲ್ಲಿಸಿಲ್ಲ ಮತ್ತು ಸ್ವಾಧೀನ ಪಡೆದಿಲ್ಲ ಎಂದರೆ ಸರಿ. ನಿಡಿ 1 ರಲ್ಲಿರುವ ಆಸ್ತಿಯು ಉಳುಮೆ ಜಮೀನಾಗಿ ಉಳಿದಿಲ್ಲ ಮತ್ತು ಎಲ್ಲರೂ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು 4-5 ಚಿಕ್ಕ ಚಿಕ್ಕ ಮನೆಗಳಿವೆ ಎಂದು ನುಡಿಯುತ್ತಾರೆ. ಸದರಿ ಮನೆಗಳಿಗೆ ಪಂಚಾಯತಿಯಲ್ಲಿ ಖಾತೆ ಆಗಿದ್ದು ಕಂದಾಯವನ್ನು ಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳ ಮೇಲೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಗೆ ಬರುತ್ತದೆ ಎಂದರೆ ಸಾಕ್ಷಿಯು ಇನ್ನೂ ನಗರಸಭೆ ಬಂದಿಲ್ಲ ಎಂದು ನುಡಿಯುತ್ತಾರೆ. ವಾದಿಯು ನನ್ನ ವಿರುದ್ಧ ಪೋಲೀಸರಿಗೆ ದೂರು

ನೀಡಿದ್ದರು ಎಂದರೆ ಸಾಕ್ಷಿಯು ಅವರೂ ಕೊಟ್ಟಿದ್ದರು ನಾವು ಅವರ ಮೇಲೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಂತರ ಈ ದಾವೆ ದಾಖಲಿಸಿದ್ದಾರೆ ಎಂದರೆ ಸರಿ. ಪೋಲೀಸರಿಗೆ ದೂರು ನೀಡಿದ ಸಂದರ್ಭದಲ್ಲಿ ಅವರ ತಂಟೆಗೆ ಹೋಗಬಾರದು ಎಂದು ತಿಳಿಸಿ ಹಿಂಬರಹ ನೀಡಿದ್ದಾರೆ ಎಂದರೆ ಸಾಕ್ಷಿಯು ಇಬ್ಬರಿಗೂ ನೀಡಿದ್ದಾರೆ ಎಂದು ನುಡಿಯುತ್ತಾರೆ. ನನಗೆ ನೀಡಿದ ಹಿಂಬರಹವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಅವರ ತಂಟೆಗೆ ಹೋಗಬಾರದು ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸಾಕ್ಷಿಯು ಅದಕ್ಕೆ ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಯು ಹೆಣ್ಣು ಮಗಳಾಗಿರುವುದರಿಂದ ನಾವು ಗುಂಪು ಕಟ್ಟಿಕೊಂಡು ಗಲಾಟೆ ಮಾಡಲು ಹೋಗಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕಿಲ್ಲ ಮತ್ತು ನಾನು ಸ್ವಾ ಧೀನದಲ್ಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇದೆ**

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**